# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 2860 |
| ಸದಸ್ಯರ ಹೆಸರು | : | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 30-03-2022 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಜ್ಯದ ಎಲ್ಲಾ ಟೋಲ್‌ಗಳಲ್ಲಿ ಗಣ್ಯ ವ್ಯಕ್ತಿಗಳು ಹಾಗೂ ಆಂಬ್ಯುಲೆನ್ಸ್ ಓಡಾಟಕ್ಕೆ ಪ್ರತ್ಯೇಕವಾದ ಲೈನ್ ವ್ಯವಸ್ಥೆ ಕಲ್ಪಿಸಲಾಗಿದೆಯೇ | ರಾಜ್ಯದ ರಾಷ್ಟ್ರೀಯ ಹೆದ್ದಾರಿಗಳಲ್ಲಿರುವ ಎಲ್ಲಾ ಟೋಲ್ ಪ್ಲಾಜಾಗಳಲ್ಲಿ ಎಡಭಾಗದಲ್ಲಿ ಎರಡು ಕಡೆ ಮಾರ್ಗಗಳಲ್ಲಿ ಆಂಬ್ಯುಲೆನ್ಸ್ ಮತ್ತು ಗಣ್ಯ ವ್ಯಕ್ತಿಗಳವರ ವಾಹನಗಳ ಸುಗಮ ಸಂಚಾರಕ್ಕಾಗಿ ಸಮರ್ಪಿತ ಪ್ರತ್ಯೇಕ ಪಥವನ್ನು ಮೀಸಲಿಡಲಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದವರು ವರದಿ ಮಾಡಿರುತ್ತಾರೆ<br><br>ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ನಿರ್ವಹಿಸಲಾಗುತ್ತಿರುವ ರಾಜ್ಯ ಹೆದ್ದಾರಿಗಳು ಬಹುತೇಕ 2 ಪಥಗಳ ಸಾಮಾನ್ಯ ವಾಹನ ಸಾಂದ್ರತೆ ಹೊಂದಿರುವ (ಸರಸಾರಿ ದಿನಕ್ಕೆ 3000-5000 ಪಿ.ಸಿ.ಯು) ರಸ್ತೆಗಳಾಗಿದ್ದು, ಗಣ್ಯ ವ್ಯಕಿಗಳು ಹಾಗೂ ಆಂಬೂಲೆನ್ಸ್ ಓಡಾಟಕ್ಕೆ ಟೋಲ್ ಪ್ಲಾಜಾಗಳಲ್ಲಿ ಪ್ರತ್ಯೇಕವಾದ ಲೇನ್ ವ್ಯವಸ್ಥೆ ಕಲ್ಪಿಸಿರುವುದಿಲ್ಲ. |
| ಆ) | ವಿ.ಐ.ಪಿ ಪಾಸ್ ಇದ್ದರೂ ಸಹ ಟೋಲ್ ಸಿಬ್ಬಂದಿಯು ಸ್ಪಂದಿಸದೆ, ವಿನಾಕಾರಣ ಸುಗಮ ಸಂಚಾರಕ್ಕೆ ಅಡ್ಡಿಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ | ರಾಷ್ಟ್ರೀಯ ಹೆದ್ದಾರಿಯಲ್ಲಿ ಗಣ್ಯವ್ಯಕ್ತಿಗಳವರ ಪಥದಲ್ಲಿ ವಾಹನಗಳ ತಡೆ ರಹಿತ ಸಂಚಾರಕ್ಕಾಗಿ ಮಾರ್ಷಲ್‌ಗಳನ್ನು ನೇಮಿಸಲಾಗಿದೆ. ಟೋಲ್ ಪ್ಲಾಜಾಗಳಲ್ಲಿ ನೇಮಿಸಿರುವ ಮಾರ್ಷಲ್‌ಗಳಿಗೆ ಮತ್ತು ಸಿಬ್ಬಂದಿಗಳಿಗೆ ಸಭ್ಯತೆಯಿಂದ ಮತ್ತು ವಿನಯತೆಯಿಂದ ಕಾರ್ಯನಿರ್ವಹಿಸಲು ತರಬೇತಿಯನ್ನು ನೀಡಲಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದವರು ವರದಿಸಿರುತ್ತಾರೆ. ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ 9ನೇ ನವೆಂಬರ್ 2019ರ ಮಾರ್ಗಸೂಚಿಯಂತೆ (SOP) ರಾಷ್ಟ್ರೀಯ ಹೆದ್ದಾರಿಗಳ ಎಲ್ಲಾ ಟೋಲ್ ಪ್ಲಾಜಾಗಳನ್ನು ದಿನಾಂಕ: 16.02.2021 ರಿಂದ ಫಾಸ್ಟ್‌ಟ್ಯಾಗ್ ಅಳವಡಿಸಿ ತಡೆರಹಿತ ಸಂಚಾರಕ್ಕಾಗಿ ಮೇಲ್ದರ್ಜೇಗೇರಿಸಲಾಗಿದೆ. ಈ ಮಾರ್ಗಸೂಚಿಯಂತೆ ಟೋಲ್ ಪ್ಲಾಜಾಗಳಲ್ಲಿ ಗಣ್ಯವ್ಯಕ್ತಿಗಳ ಸುಗಮ ಸಂಚಾರಕ್ಕಾಗಿ ಈಗಾಗಲೇ ಅವರ ಕೋರಿಕೆಯಂತೆ ಮತ್ತು ನೀಡಿರುವ ವಿವರಗಳ ಮೇಲೆ ವಿನಾಯಿತಿ ಫಾಸ್ಟ್‌ಟ್ಯಾಗ್ ವಿತರಿಸಲಾಗಿದೆ ಮತ್ತು ಈ ಕಾರ್ಯ ನಿರಂತರವಾಗಿದೆ. ಈ ಮಾರ್ಗಸೂಚಿಯಂತೆ ಟೋಲ್‌ಗಳಲ್ಲಿ ಹಾದು ಹೋಗುವ ಎಲ್ಲಾ ವಾಹನಗಳು ವಿನಾಯಿತಿ ಅಥವಾ ಸಾಮಾನ್ಯ ಫಾಸ್ಟ್‌ಟ್ಯಾಗ್ ಹೊಂದುವುದು ಕಡ್ಡಾಯವಾಗಿರುತ್ತದೆ. |

| | | |
|---|---|---|
| ಇ) | ಈ ಸಂಬಂಧ ಇದುವರೆವಿಗೂ ಎಷ್ಟು ದೂರುಗಳು ದಾಖಲಾಗಿವೆ; | ಗಣ್ಯವ್ಯಕ್ತಿಗಳ ಸುಗಮ ಸಂಚಾರಕ್ಕೆ ಅಡ್ಡಿಪಡಿಸಿರುವ ಸಂಬಂಧ ಭಾರತೀಯ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ, ಚಿತ್ರದುರ್ಗ ಘಟಕದ ವ್ಯಾಪ್ತಿಯಲ್ಲಿ ಒಂದು ದೂರು ದಾಖಲಾಗಿದೆ. ಇದು ಮಾನ್ಯ ಶಾಸಕರಾದ ಶ್ರೀ ಈ. ತುಕಾರಾಂರವರು ನೀಡಿದ ದೂರಾಗಿರುತ್ತದೆ. ಮಾನ್ಯ ಶಾಸಕರ ದೂರಿನ ಮೇರೆಗೆ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಸ್ಪಷ್ಟನೆ ಕೋರಲಾಗಿದ್ದು, ಗುಯಿಲಾಲ್ ಟೋಲ್ ಪ್ಲಾಜಾದಲ್ಲಿ ಮತ್ತು ಕರಿಜೀವನಹಳ್ಳಿ ಹತ್ತಿರದ ಟೋಲ್ ಪ್ಲಾಜಾದಲ್ಲಿ ಜರುಗಿದ ಘಟನೆಗೆ ಸಂಬಂಧಪಟ್ಟ ರಿಯಾಯಿತಿದಾರರು ಕ್ಷಮಾಪಣೆ ಕೋರಿರುವುದಾಗಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ ರವರು ವರದಿಸಿರುತ್ತಾರೆ. ಆದಾಗ್ಯೂ ಇಂತಹ ಘಟನೆಗಳು ಮರುಕಳಿಸದಂತೆ ಟೋಲ್‌ಪ್ಲಾಜಾಗಳ ಸಿಬ್ಬಂದಿಗೆ ಸೂಕ್ತ ತರಬೇತಿ ನೀಡಿ, ಟೋಲ್‌ಪ್ಲಾಜಾಗಳಲ್ಲಿ ಗಣ್ಯವ್ಯಕ್ತಿಗಳೊಂದಿಗೆ ಸೌಜನ್ಯದಿಂದ ವರ್ತಿಸುವಂತೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ ದವರಿಗೆ ಸೂಚಿಸಲಾಗಿದೆ. |
| ಈ) | ಸದರಿ ದೂರುಗಳು ಹಾಗೂ ಸಿಬ್ಬಂದಿಯ ಬೇಜವಾಬ್ದಾರಿತನ ಹಾಗೂ ಅಸಡ್ಡೆ ನಡವಳಿಕೆಯ ಸಂಬಂಧ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ ? | |

ಕಡತ ಸಂಖ್ಯೆ: ಲೋಇ 135 ಸಿಎನ್‌ಹೆಚ್ 2022 (ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು